ಆರ್. ಮಧುಸೂದನ್, ಹಾಸನ
ಮುಪ್ಪಿನಲ್ಲಿ ಹಲ್ಲು ಉದುರುವಂತೆ ನಾಲಿಗೆಯೂ ಉದುರಿದ್ದರೆ ಏನಾಗುತ್ತಿತ್ತು?



ತಿಕ್ಕಲು ಮಾತಾಡುವ ನಾಲಿಗೆ ಉದುರಿಸಿ 'ಕ್ಲೀನ್ ಟಂಗ್' ಸಿಕ್ಕಿಸಬಹುದಿತ್ತು.

ಬಿ. ಚಂದ್ರೇಗೌಡ, ಬೆಂಗಳೂರು
'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂದು ಶ್ರೀಕೃಷ್ಣ ಹೇಳಿದ್ದೇಕೆ?
ಯುದ್ಧ ಮಾಡುವವರೆಲ್ಲ ಟಿಎಡಿಎ, ಸ್ಯಾಲರಿ ಹೈಕ್, ಸಿಕ್ ಲೀವ್‌ಗಳನ್ನು ಕೇಳತೊಡಗದಿರಲಿ ಎಂದು.

ಪಿ.ಜೆ. ರಾಘವೇಂದ್ರ, ಮೈಸೂರು
ರಾಜಕಾರಣಿಗಳೇಕೆ ಕಾಲ್ತುಳಿತಕ್ಕೆ ಸಿಕ್ಕಿ ಸಾಯುವುದಿಲ್ಲ?
ನೀವೂ ಸರಿಯೇ! ಕೈಗೇ ಸಿಗದವರು ಕಾಲಿಗೆ ಸಿಕ್ಕಾರೇನು?

ಕೃಷ್ಣ ಕೊಡಂಚ, ಬೆಂಗಳೂರು
'ಮಂಗಮಾಯ'ದಲ್ಲಿ ಮಂಗ ಯಾಕೆ ಬಂತು?



ಲಂಕೆಯಲ್ಲಿ ಛಂಗನೆ ಹಾರಿ ಛಕ್ಕನೆ ಕಾಣದಾಗುತ್ತಿದ್ದ ಮಹಾಕಪಿಯ ಸ್ಮರಣೆಗಾಗಿ ಈ ಪದ ಮೂಡಿದ್ದಂತೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ತಾವು ಬಾನುಲಿಯನ್ನು ಆಲಿಸುತ್ತೀರಾ ಸಾರ್?
ಅಷ್ಟೇ ಅಲ್ಲ, 'ಬಾ, ನುಲಿ' ಎಂದು, ನಲ್ಲೆಯ ವಯ್ಯಾರವನ್ನೂ ಆಸ್ವಾದಿಸುತ್ತೇನೆ.

ಹೆಚ್.ವಿ. ಶ್ರೀಧರ್, ಬೆಂಗಳೂರು
ವಿಶ್ವ ತಾಯಂದಿರ ದಿನದ ಮಾದರಿಯಲ್ಲಿ ವಿಶ್ವ ಅತ್ತೆಯರ ದಿನವನ್ನು ಏಕೆ ಆಚರಿಸುವುದಿಲ್ಲ?
'ಯಾವ ಅತ್ತೆಯದು?' ಎಂದು ಸತಿಪತಿಯರಲ್ಲಿ ಒಮ್ಮತ ಮೂಡುವುದಿಲ್ಲವಂತೆ.

ಬಿ. ಬಸವರಾಜ್, ಹರಿಹರ
ಅಂದು 'ಸಹವಾಸದಿಂದ ಸನ್ಯಾಸಿ ಕೆಟ್ಟ'. ಇಂದು?
ಸಿಸಿಟಿವಿಯಿಂದ ಸನ್ಯಾಸಿ ದಿಕ್ಕೆಟ್ಟ.

ಅಮರಯ್ಯಾ ಪತ್ರಿಮಠ, ಶೋರಾಪುರ
ವಿಶ್ವದ ಉಳಿವು–ಅಳಿವು ಯಾವುದನ್ನು ಅವಲಂಬಿಸಿದೆ?
ನ್ಯೂಕ್ಲಿಯರ್ ಬಾಂಬ್‌ನ ಟ್ರಿಗರ್ ಮೇಲೆ ಬೆರಳಿಟ್ಟಿರುವ ಜಗತ್ ಹುಚ್ಚರನ್ನು!

ಬೀ. ನಾಗರಾಜು, ಬೆಂಗಳೂರು
ಅತ್ತೆ ಬೇಗ ಸಾಯಬೇಕು ಎಂದು ದೇವರ ಹುಂಡಿಯಲ್ಲಿ ಚೀಟಿ ಹಾಕುವ ಸೊಸೆ ಮುಂದೆ ಅತ್ತೆ ಆದಾಗ?
ಅವಳ ಸೊಸೆ ದೇವನ ಸಹಾಯವನ್ನೂ ಬೇಡದಿರಬಹುದು!

ಜಗದೀಶ ಬಿ. ಹೊಸೂರು, ಮೈಸೂರು
ಮಹಾತ್ಮರ ತತ್ವಗಳ ಅನುಸರಣೆಗಿಂತ ಅವರ ಅದ್ಧೂರಿ ಜಯಂತಿಗಳನ್ನು ಆಚರಿಸುವುದೇ ಹೆಚ್ಚಲ್ಲ?
ಸರಿಯೇ. ತತ್ವಕ್ಕೆ ಅಳಿವುಂಟು, ಜಯಂತಿಗೆ ಅಳಿವಿಲ್ಲ.

ಬಿ.ಆರ್. ಉಷಾ, ಬೆಂಗಳೂರು
ಉತ್ತರ ಗೊತ್ತಾಗದ ಪ್ರಶ್ನೆಯನ್ನು ಏನು ಮಾಡುತ್ತೀರಿ?
ಚಿಂತನೆಯ ಕಾಂಪಾಸ್ ಬಳಸಿ ಉತ್ತರ ಕಂಡುಹಿಡಿಯುತ್ತೇನೆ.

ಪಿ. ಜಯವಂತ ಪೈ, ಕುಂದಾಪುರ
ಎಣ್ಣೆಗೂ, ಬೆಣ್ಣೆಗೂ ವ್ಯತ್ಯಾಸವೇನು?
ಕಾವೇರಿದ ಪರಿಸ್ಥಿತಿಯಲ್ಲಿ ಎಣ್ಣೆ ತನ್ನತನ ಉಳಿಸಿಕೊಳ್ಳುತ್ತೆ. ಬೆಣ್ಣೆ ತನ್ನ ಐಡೆಂಟಿಟಿ ಕಳೆದುಕೊಳ್ಳುತ್ತೆ.

ಮಲ್ಲಿಕಾರ್ಜುನ, ಸುರಧೇನುಪುರ
ಯಾರ ಮನೆಯಲ್ಲಾದರೂ ಮುದ್ದಿನ ಸೊಸೆಯನ್ನು ಕಂಡೀರಾ?
ಸೊಸೆಯರೆಲ್ಲಾ ಮುದ್ದೇ. ಪರಿಸ್ಥಿತಿಗೆ ಅನುಗುಣವಾಗಿ ಮೊದ್ದೋ, ಹದ್ದೋ ಆಗುವರಷ್ಟೆ.


## ಬಹುಮಾನಿತ ಪ್ರಶ್ನೆ

ಶೀಲಾ ಸತ್ಯೇಂದ್ರ ಸ್ವಾಮಿ, ಹರವೆ
ಏಟು ಕೊಡೋದಕ್ಕೆ 'ಬಿಸಿ ಬಿಸಿ ಕಜ್ಜಾಯ' ಅನ್ನೋದು ಯಾಕೆ? ಬೇರೆ ತಿಂಡಿಗಳೇಕಲ್ಲ?
ಕಜ್ಜ = ಕೆಲಸ; ಆಯ= ಸಂಪಾದನೆ. ಮಾಡಿದ ಕೆಲಸಕ್ಕೆ ಕೂಡಲೇ ಕೊಟ್ಟ ಪ್ರತಿಫಲವಾದ್ದರಿಂದ ಬಿಸಿಬಿಸಿ.

ಡಾ. ಜಿ.ಡಿ. ರಾಘವನ್, ದಾವಣಗೆರೆ
ಹೆಂಗಸರ ಬುದ್ಧಿ ಮೊಳಕಾಲ ಕೆಳಗಿರುತ್ತೆ ಅಂತಾರೆ. ಗಂಡಸರ ಬುದ್ಧಿ ಎಲ್ಲಿರುತ್ತೆ?
ರೂಪಸಿಯರ ರೂಪದ ಮೇಲೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ
ಆಗ ಅತಿಥಿ ದೇವೋ ಭವ. ಈಗ?
ಈಗಲೂ ಅದೇ. 'ದೇವನಂತೆಯೇ ಕಣ್ಣಿಗೆ ಬೀಳದಿರು ಭಯ್ಯಾ!'

ವಿ. ಹೇಮಂತಕುಮಾರ್, ಬೆಂಗಳೂರು
ಮದುವೆ ಆಗುವಾಗ ವಧು–ವರರು ಕೈ ಹಿಡಿದುಕೊಂಡಿರಬೇಕೆಂದು ಪುರೋಹಿತರು ಹೇಳುವುದೇಕೆ?



ಪಟ್ಟುಗಳನ್ನು ಹಾಕುವುದಕ್ಕೆ ಮುಂಚೆ ಕೈ ಹಿಡಿದುಕೊಳ್ಳುವುದು ಜಟ್ಟಿಗಳ ಕ್ರಮ.

ಕುಣಿಗಲ್ ಜಯಣ್ಣ, ಪಾಂಡವಪುರ
ಮದುವೆ ಆಗದಿದ್ದರೆ ಮುಕ್ತಿ ಇಲ್ಲವೇ ಗುರು?
ಇದೆ. ಆದರೆ ಬಂಧನವಿಲ್ಲದ ಮುಕ್ತಿ ಮುಕ್ತಿಯ ಫೀಲ್ ಕೊಡುವುದಿಲ್ಲ.

ಎ. ಮೃತ್ಯುಂಜಯ, ಪಾಂಡವಪುರ
ಸೌಂದರ್ಯಕ್ಕೆ ಮಾರು ಹೋಗದವರು ಯಾರು?
ಡೌರಿ ಸಿಕ್ಕರೆ ಕುರೂಪಿಯೂ ಸೈ ಎನ್ನುವವರು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಮನುಷ್ಯನಿಗೆ ನಿಜವಾದ ಆಸ್ತಿ ಯಾವುದು?
ಪ್ರಸಂಗಾವಧಾನ.

■ ರಾಮ್